O.S.No.488/2014
DW-2

(ಇಂದು ದಿನಾಂಕ: 21-12-2021 ರಂದು ಸಾಕ್ಷಿದಾರರನ್ನು ಕರೆಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ ಎಸ್.ಎಸ್.ಕೆ. ವಕೀಲರಿಂದ.**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಎ.ಜಿ ವಕೀಲರಿಂದ.**

ನನ್ನ ತಂದೆ ತಾಯಿ ಹಾಗು ನನ್ನ ಸ್ವಂತ ಊರು ಕೆಂಗಲ್ ಇರುತ್ತದೆ ಎಂದರೆ ಸರಿ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಜಮೀನು ಇದೆ. ಅದರ ಸರ್ವೆ ನಂಬರ್ 95. ಅದು 5 ಎಕರೆ 15 ಗುಂಟೆ ಇದೆ.

1 ನೇ ಪ್ರತಿವಾದಿಯ ಹಾಗೂ ಅವರ ಅಣ್ಣ ತಮ್ಮಂದಿರು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತು. ಅವರು ನಾಲ್ಕು ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರರು. ಆ ಪೈಕಿ 1 ನೇ ಪ್ರತಿವಾದಿ ಹಾಗೂ ಪಂಪಣ್ಣನನ್ನು ಹೊರತುಪಡಿಸಿ, ಬೇರೆಯವರು ತೀರಿಕೊಂಡಿರುತ್ತಾರೆ. ವೀರಭದ್ರಪ್ಪನಿಗೆ ಒಂದು ನಾಲ್ಕು ಎಕರೆ ಮತ್ತು ಒಂದು ಐದು ಎಕರೆ ಜಮೀನು ಇದೆ ಅದರ ಸರ್ವೆ ನಂಬರ್ ಗೊತ್ತಿಲ್ಲ. 1 ನೇ ಪ್ರತಿವಾದಿ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳಲ್ಲಿ ಭಾಗ ಆಗುವಾಗ ಇದ್ದೇ ಆದರೆ 1 ನೇ ಪ್ರತಿವಾದಿ ಮತ್ತು ಅವರ ಸಹೋದರರು ಭಾಗ ಮಾಡಿಕೊಳ್ಳುವಾಗ ಇರಲಿಲ್ಲ. ಸದರಿ ಸಮಯದಲ್ಲಿ ಭಾಗ ಪತ್ರ ಮಾಡಿಕೊಂಡಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ರಾಘಪ್ಪಚಾರಿ ಸಹಾ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ರಾಘಪ್ಪಚಾರಿ ಕುಲಕರ್ಣಿಯವರೆ ಬರೆದಿರುತ್ತಾರೆ. ಆ ಭಾಗ ಪತ್ರದ ಪ್ರಕಾರವೇ ಮುಟೆಶನ್ನುಗಳಾಗಿರುತ್ತವೆ. 1989 ರಲ್ಲಿ ಭಾಗ ಪತ್ರ

ಆಗಿರುತ್ತದೆ. ಸದರಿ ಭಾಗ ಪತ್ರಕ್ಕೆ ಅಣ್ಣ-ತಮ್ಮಂದಿರು ಹಾಗೂ ಮಕ್ಕಳು ಸಹಾ ಸಹಿ ಮಾಡಿರುತ್ತಾರೆ. ಭಾಗಪತ್ರದಲ್ಲಿ ಹೆಣ್ಣುಮಕ್ಕಳ ಹೆಸರು ಬರೆಸಿಲ್ಲ. ಸದರಿ ಭಾಗಪತ್ರವನ್ನು ಬಿಳಿ ಹಾಳೆಯ ಮೇಲೆ ಅಂದರೆ ರೂಪಾಯಿ ಸ್ಟ್ಯಾಂಪಿನ ಮೇಲೆ ಬರೆದಿರುತ್ತಾರೆ. ಸದರಿ ಭಾಗಪತ್ರವು 1 ನೇ ಪ್ರತಿವಾದಿ ಹತ್ತಿರ ಇರಬಹುದು. ಆ ದಿನ ಯಾವುದೇ ಭಾಗ ಪತ್ರ ಆಗಿರುವುದಿಲ್ಲ, ಪಾಲು ವಿಭಾಗ ಸಹಾ ಆಗಿರುವುದಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಭಾಗ ಪತ್ರದ ಪ್ರಕಾರ ಸರ್ವೆ ನಂಬರ್ 20 ರಲ್ಲಿ 8 ಎಕರೆ 5 ನೇ ಪ್ರತಿವಾದಿ ಚಂದ್ರಪ್ಪನಿಗೆ, ಸರ್ವೆ ನಂಬರ್ 21 ರಲ್ಲಿ 6 ಎಕರೆ 2 ಗುಂಟೆ ಶರಣಪ್ಪನಿಗೆ, ಸರ್ವೆ ನಂಬರ್ 13 ರಲ್ಲಿ 2 ಎಕರೆ 35 ಗುಂಟೆ ಶರಣಪ್ಪನಿಗೆ ಆಯಿತು. ಸರ್ವೆ ನಂಬರ್ 15 ರಲ್ಲಿ 25 ಗುಂಟೆ ಜಮೀನು ಶರಣಪ್ಪನಿಗೆ, ಸರ್ವೆ ನಂಬರ್ 60 ರಲ್ಲಿ 5 ಎಕರೆ ಜಮೀನು ಚನ್ನಬಸಪ್ಪನಿಗೆ ಹಾಗೂ 3 ಎಕರೆ ಜಮೀನು ಶಂಕರಮ್ಮನಿಗೆ ಹೋಯಿತು. ಈ ಪ್ರಕಾರ ಪಾಲು ವಿಭಾಗ ಆಗಿರುತ್ತದೆ. ಈ ಪ್ರಕಾರ ಯಾವುದೇ ವಿಭಾಗ ಆಗಿಲ್ಲ ಆದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1989 ರಲ್ಲಿ 5 ನೇ ಪ್ರತಿವಾದಿಗೆ 4-5 ವರ್ಷ ವಯಸ್ಸಾಗಿತ್ತು. ಆ ಸಮಯದಲ್ಲಿ 5 ನೇ ಪ್ರತಿವಾದಿಗೆ ಶಂಕರಮ್ಮ ಸಂರಕ್ಷಣದಾರರಾಗಿದ್ದರು. ಆ ಸಮಯದಲ್ಲಿ ಶರಣಪ್ಪನಿಗೆ 18 ವರ್ಷ ವಯಸ್ಸಾಗಿತ್ತು. ಸದರಿ ಶರಣಪ್ಪ ಎಲ್ಲಿ ಹೋಗಿದ್ದಾನೆ ಎಂದು ಗೊತ್ತಿಲ್ಲ. ಆತನು ಹೊಗಿ 10-12 ವರ್ಷಗಳಾಗಿರುತ್ತವೆ. ಆತನ ಮದುವೆ ಆಗಿರಲಿಲ್ಲ.

ನನ್ನ ಮುಖ್ಯವಿಚಾರಣಾ ಪತ್ರದಲ್ಲಿ ನಾನು ಏನು ಹೇಳಿದ್ದೇನೆ ಅದನ್ನೆ ಬರೆದಿರುತ್ತಾರೆ. 1 ನೇ ಪ್ರತಿವಾದಿ ಹೊಲದಲ್ಲಿಯೇ ಮನೆ ಕಟ್ಟಿಕೊಂಡು ಅಲ್ಲಿಯೇ ಎಲ್ಲರೂ ಇರುತ್ತಾರೆ. ಸರ್ವೆ ನಂ.21 ರಿಂದ ಬಂದ ಆದಾಯದ ಮೂಲಗಳಿಂದಲೇ ಅವರು ಬೇರೆ ಆಸ್ತಿಗಳನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ವ್ಯಾಪಾರ ಮಾಡುತ್ತಿದ್ದರು ಹಾಗೂ ಆ ಸಮಯದಲ್ಲಿ ಮಳೆ ಆಗುತ್ತಿರಲಿಲ್ಲ. 1 ನೇ

ಪ್ರತಿವಾದಿಗೆ ಕೆಟ್ಟ ಚಟಗಳು ಇದ್ದವೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಖರೀದಿಸಿದ ಆಸ್ತಿಗಳ ದಾಖಲೆಗಳನ್ನು ನಾನು ನೋಡಿಲ್ಲ.

ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮೊದಲು ಚನ್ನಬಸಪ್ಪನ ಅಣ್ಣ ದೊಡ್ಡಬಸಪ್ಪ ಆಸ್ತಿಯನ್ನು ಖರೀದಿಸಿದ್ದ. ಈ ದಾವೆಯಲ್ಲಿ ಯಾವ ಆಸ್ತಿಗಳಿವೆ ನನಗೆ ಗೊತ್ತಿಲ್ಲ. ವಾದಿಯು 1 ನೇ ಪ್ರತಿವಾದಿಯ ಮಗಳು. 1 ನೇ ಪ್ರತಿವಾದಿಯ ಹತ್ತಿರ ನೀವು ಸಾಲ ಪಡೆದು ಆತನಿಗೆ ಬಡ್ಡಿ ಪಾವತಿಸುತ್ತಿದ್ದೆ ಎಂದರೆ ಸರಿಯಲ್ಲ. ಆತನಿಗೆ ಸಹಾಯವಾಗಲಿ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಒ.ಹೇ.ಕೇ.ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು.